# ಕರ್ನಾಟಕ ಸರ್ಕಾರ

ನಂ. ನಅಕೋ/ಕೆ.ಎಂ.ಆರ್.ಪಿ/ಮಾತಂಜ್ಞಾ/ಸಿಆರ್/28/2008-09 **ಜಿಲ್ಲಾಧಿಕಾರಿಯವರ ಕಾರ್ಯಾಲಯ**

ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ: 26-08-2008

## "ಅಧಿಸೂಚನೆ"

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಕೆ.ಎಂ.ಆರ್.ಪಿ ಯೋಜನೆಯಡಿಯಲ್ಲಿ ಮಾಹಿತಿ ತಂತ್ರಜ್ಞಾನ ಕನ್ಸೆಲ್‌ಟೆಂಟ್‌ಗಳು ಹಾಗೂ ನೋಡಲ್ ಇಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ಪುರಸಭೆಗೆ ಮಾಹಿತಿ ತಂತ್ರಜ್ಞಾನ ಕನ್ಸೆಲ್‌ಟೆಂಟ್ (Junior Programmer)ಹುದ್ದೆಯನ್ನು ಹಾಗೂ ದೇವನಹಳ್ಳಿ, ವಿಜಯಪುರ, ಹೊಸಕೋಟೆ ಮತ್ತು ನೆಲಮಂಗಲ ಪುರಸಭೆಗಳಲ್ಲಿ ರಸ್ತೆಗಳ ನಾಮಕರಣ ನಂಬರೀಕರಣ ಮತ್ತು ಆಸ್ತಿಗಳ ನಾಮಕರಣ ನಂಬರೀಕರಣ, ಆಸ್ತಿ ಸರ್ವೆ ಕಾರ್ಯ, ವಾರ್ಡ್ ನಕ್ಷೆ ತಯಾರಿಸುವ ಹಾಗೂ ನಮೂನೆ- 'ಸಿ' ತುಂಬುವ ಕೆಲಸಗಳ ಮೇಲುಸ್ತುವಾರಿಗಾಗಿ ನೋಡಲ್ ಇಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಯ್ಕೆಗೊಂಡ ಅಭ್ಯರ್ಥಿಗಳು ಸದರಿ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಲು ಸಿದ್ದರಿರಬೇಕು. ಅಭ್ಯರ್ಥಿಗಳ ಸ್ಥಳ ನಿಯುಕ್ತಿಯನ್ನು ಕೌನ್ಸಿಲಿಂಗ್ ಮುಖಾಂತರ ಮಾಡಲಾಗುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ: 20-09-2008ರಂದು ಕೊನೆಯದಿನ**ವಾಗಿರುತ್ತದೆ. ನಿಗದಿತ ಅರ್ಜಿ ನಮೂನೆಗಳನ್ನು **ದಿನಾಂಕ: 10-09-2008**ರನಂತರ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು-01 ಇಲ್ಲಿ ಪಡೆಯಬಹುದಾಗಿದೆ.

### ಮಾಹಿತಿ ತಂತ್ರಜ್ಞಾನ ಕನ್ಸೆಲ್‌ಟೆಂಟ್‌ಗಳಿಗೆ ವಿದ್ಯಾರ್ಹತೆ ಹಾಗೂ ಕನ್ಸೆಲ್‌ಟೆನ್ಸಿ ಫೀ.

1) ಅಭ್ಯರ್ಥಿಯು ಡಿಪ್ಲೋಮಾ ಇನ್ ಕಂಪ್ಯೂಟರ್ ಸೈನ್ಸ್ (From the Board of the Technical Education) ಮಾಸಿಕ ಕನ್ಸೆಲ್‌ಟೆನ್ಸಿ ಫೀ - ರೂ. 5000/- ಇದರ ಜೊತೆಗೆ ಒಂದು ವರ್ಷ ಪೂರ್ಣ ಸೇವೆ ತೃಪ್ತಿದಾಯಕವಾಗಿ ಪೊರೈಸಿದಲ್ಲಿ ಹೆಚ್ಚುವರಿಯಾಗಿ ರೂ. 12,000/-ಗಳನ್ನು Lump sum ಆಗಿ ಪಾವತಿ ಮಾಡಲಾಗುವುದು.
2) ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಉತ್ತಮ ಜ್ಞಾನವುಳ್ಳವರಾಗಿರಬೇಕು.
3) ಅವಧಿ ಒಂದು ವರ್ಷಕ್ಕೆ ಕನ್ಸ್‌ಲ್‌ಟೆಂಟ್‌ಆಗಿ ನೇಮಕ ಮಾಡಿಕೊಳ್ಳಲಾಗುವುದು. ಈ ಒಂದು ವರ್ಷದ ಕನ್ಸ್‌ಲ್‌ಟೆನ್ಸಿ ಸೇವೆಯನ್ನು ತೃಪ್ತಿದಾಯವಾಗಿ ಪೂರೈಸಿದಲ್ಲಿ ಅವರ ಸೇವೆಯನ್ನು ಮುಂದಿನ ಒಂದು ವರ್ಷಕ್ಕೆ ವಿಸ್ತರಿಸಲಾಗುವುದು.
4) ಅಭ್ಯರ್ಥಿಗಳು, ಜನನ ಪ್ರಮಾಣ ಪತ್ರ, ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟ ಪ್ರಮಾಣ ಪತ್ರಗಳ ಪ್ರತಿಗಳನ್ನು ಹಾಗೂ ಒಂದು ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
5) ಮೇಲ್ಕಂಡ ಹುದ್ದೆಗೆ ಮೀಸಲಾತಿಯನ್ನು ಅನುಸರಿಸಿ ಮೆರಿಟ್ ಪಟ್ಟಿಯನ್ನು ಸಿದ್ದಪಡಿಸಲಾಗುವುದು.

6) ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವುದರೊಳಗಾಗಿ ಸರ್ಕಾರದಿಂದಾಗಲಿ/ ನಿರ್ದೇಶನಾಲಯದಿಂದಾಗಲಿ ಮೀಸಲಾತಿ ಸಂಬಂಧದಲ್ಲಿ ನಿರ್ದೇಶನಗಳು ಬಂದಲ್ಲಿ ಸದರಿ ನಿರ್ದೇಶನದಂತೆ ನೇಮಕಾತಿ ಪ್ರಕ್ರಿಯೆಯು ಬದ್ಧವಾಗಿರುತ್ತದೆ.
7) ಕನ್ಸಲ್‌ಟೆಂಟ್ ಹುದ್ದೆಗೆ ಅರ್ಜಿ ಸಲ್ಲಿಸಿ ಕೊಳ್ಳುವ ಅಭ್ಯರ್ಥಿಗಳ ವಯೋಮಿತಿ ಈ ಕೆಳಕಾಣಿಸಿದಂತೆ ಇರತಕ್ಕದ್ದು.

| ಕ್ರ. ಸಂ | ವರ್ಗಗಳು | ವಯಸ್ಸು | |
|---|---|---|---|
| | | ಕನಿಷ್ಟ | ಗರಿಷ್ಟ |
| 1 | ಸಾಮಾನ್ಯ ವರ್ಗ | 18 | 33 |
| 2 | ಪರಿಶಿಷ್ಟ ಜಾತಿ | 18 | 38 |
| 3 | ಪರಿಶಿಷ್ಟ ವರ್ಗ | 18 | 38 |
| 4 | ಹಿಂದುಳಿದ ಪ್ರವರ್ಗ –1 | 18 | 38 |
| 5 | ಹಿಂದುಳಿದ ಪ್ರವರ್ಗ II(A), II(B), III(A), III(B) | 18 | 36 |

8) ಸೂಕ್ತ ಲಗತ್ತುಗಳಿಲ್ಲದೆ ಸಲ್ಲಿಸಲಾದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೇ ತಿರಸ್ಕರಿಸಲಾಗುವುದು.
9) ಅಭ್ಯರ್ಥಿಯನ್ನು ಆಯ್ಕೆ ಸಮಿತಿಯು ನಡೆಸುವ ಅರ್ಹತಾ/ಮೆರಿಟ್ ಪರಿಕ್ಷೆಯಲ್ಲಿ ಗಳಿಸಿದ ಅಂಕಗಳ (75% Weightage) ಹಾಗೂ ವಿಧ್ಯಾರ್ಹತೆಯಲ್ಲಿ ಪಡೆದ ಅಂಕ (25% Weightage) ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಘೋಷಿಸಲಾಗುವುದು.

**ನೋಡಲ್ ಇಂಜಿನಿಯರ್‌ಗಳಿಗೆ ವಿದ್ಯಾರ್ಹತೆ ಹಾಗೂ ಕನ್ಸಲ್‌ಟೆನ್ಸಿ ಫೀ.**

1) ಅಭ್ಯರ್ಥಿಯು ಬಿ.ಇ (ಸಿವಿಲ್) ಅಥವಾ ಡಿಪ್ಲೋಮಾ (ಸಿವಿಲ್) ವಿದ್ಯಾರ್ಹತೆ ಹೊಂದಿರಬೇಕು. ಸಂದರ್ಶನದ ಮೂಲಕ ನೇಮಕಾತಿ ಮಾಡಕೊಳ್ಳಾಗುವುದು
2) ಮಾಸಿಕ ಕನ್ಸಲ್‌ಟೆನ್ಸಿ ಫೀ – ರೂ. 10,000/- (ಹತ್ತು ಸಾವಿರ ರೂಗಳು) ಇರುತ್ತದೆ.
3) ನೋಡಲ್ ಇಂಜಿನಿಯರ್‌ಗಳ ಕನ್ಸಲ್‌ಟೆನ್ಸಿ ಅವಧಿಯು ಒಂದು ವರ್ಷದ ಅವಧಿಯಾಗಿರುತ್ತದೆ.
4) ಈಗಾಗಲೇ ನಿರ್ಮಲನಗರ ಯೋಜನೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
5) ಈ ನೇಮಕಾತಿಯು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಭೌಗೋಳಿಕ ಮಾಹಿತಿ ಆಸ್ತಿ ತೆರಿಗೆ ಪದ್ಧತಿಗೆ ಸಂಬಂಧಿಸಿದ ಕೆಲಸಗಳಿಗೆ ಮಾತ್ರ ಸೀಮಿತವಾಗಿರುತ್ತದೆ.
6) ಈ ನೇಮಕಾತಿಯು ಏಕ ಕಾಲ ಕಾರ್ಯವಾಗಿದ್ದು, ಮೇಲ್ಕಂಡ ಯೋಜನಾ ಅವಧಿಗೆ ಮಾತ್ರ ಸೀಮಿತವಾರುತ್ತದೆ ಹಾಗೂ ಈ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸತಕ್ಕದಲ್ಲ.
7) ಅಭ್ಯರ್ಥಿಗಳು, ಜನನ ಪ್ರಮಾಣ ಪತ್ರ, ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟ ಪ್ರಮಾಣ ಪತ್ರಗಳ ಪ್ರತಿಗಳನ್ನು ಹಾಗೂ ಒಂದು ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
8) ಸೂಕ್ತ ಲಗತ್ತುಗಳಿಲ್ಲದೆ ಸಲ್ಲಿಸಲಾದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೇ ತಿರಸ್ಕರಿಸಲಾಗುವುದು.

ಸಹಿ/-
ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ